**ಪ್ರ. ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ:: 1109/2020**

**ಸಾಕ್ಷಿದಾರರ ಹೆಸರು** : ಬಿ ವಿ ಶೇಖರಪ್ಪ **CW-1**

**ತಂದೆಯ ಹೆಸರು** : ಲೇಟ್ ವೀರಪ್ಪ

**ವಯಸ್ಸು** : 59 ವರ್ಷ

**ಉದ್ಯೋಗ** : ಎ ಎಸ್ ಐ

**ವಾಸಸ್ಥಳ** : ಲಿಂಗದಹಳ್ಳಿ

**ದಿನಾಂಕಃ 17-01-26 ರಂದು ಪ್ರಮಾಣವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿ ಸಾಕ್ಷಿಯ ವಿಚಾರಣೆ )**

**:: ಮುಖ್ಯ ವಿಚಾರಣೆ :: ಮಾನ್ಯ ಎಪಿಪಿಯವರಿಂದ ::**

ನಾನು ಕಳೆದ ಒಂದೂವರೆ ವರ್ಷದಿಂದ ಲಿಂಗದಹಳ್ಳಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿನಾಂಕಃ 13.08.2025 ರಂದು ಈ ಪ್ರಕರಣದ ಆರೋಪಿ ಎಂ ಲಿಂಗಮೂರ್ತಿ ಬಿನ್ ಮಹಾಲಿಂಗಯ್ಯ ಮುದುಗುಂಡಿ ವಾಸಿ ರವರ ಪ್ರೊಕ್ಲಮೇಶನ್ ನ್ನು ಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದು, ಈ ಸಂಬಂಧ ನಾನು ಮುದುಗುಂಡಿ ಗ್ರಾಮಕ್ಕೆ ಹೋಗಿದ್ದು, ಈ ಹಿಂದೆ ಆರೋಪಿ ವಾಸವಿದ್ದ ಸದರಿ ಗ್ರಾಮಕ್ಕೆ ಹೋಗಿ ಪಂಚರಾದ ಪ್ರದೀಪ ಮತ್ತು ಸಂತೋಷನಾಯ್ಕ ರವರಿಗೆ ಈ ಪ್ರಕರಣದ ವಿಚಾರ ತಿಳಿಸಿ ಸದರಿ ಪ್ರಕರಣದಲ್ಲಿ ತಲೆಮರೆಸಿಕೊಂಡ ಲಿಂಗಮೂರ್ತಿ ರವರು ಈವರೆಗೂ ಪೊಲೀಸರಿಗೆ ಸಿಕ್ಕಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ ಕಾರಣ ಅವರು ಊರಿಗೆ ಬಂದರೆ ಪೊಲೀಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ಹಾಜರಾಗುವಂತೆ ತಿಳಿಸಿರುತ್ತೇನೆ. ಪ್ರೊಕ್ಲಮೇಶನ್ ನ ಪ್ರತಿಯನ್ನು ಆರೋಪಿ ಹಿಂದೆ ವಾಸವಾಗಿದ್ದ ಮನೆಗೆ, ಗ್ರಾಮದ ಬಸ್ ನಿಲ್ದಾಣ, ದೇವಸ್ಥಾನದ ಹತ್ತಿರ ಮತ್ತು ಗ್ರಾಮ ಪಂಚಾಯ್ತಿ ಕಟ್ಟಡಕ್ಕೆ ಅಂಟಿಸಿರುತ್ತೇನೆ. ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು 1 ಪ್ರೊಕ್ಲಮೇಶನ್ ವಾರೆಂಟ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ1 ಎಂದು, ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು

ನಿಸಿ-2, ಸಾಕ್ಷಿಯ ಸಹಿಯನ್ನು ನಿಸಿ-2 ಎ ಎಂದು ಗುರುತಿಸಲಾಯಿತು. 1 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಸಿ-3 ಎಂದು ಗುರುತಿಸಲಾಯಿತು. ಸದರಿ ಆರೋಪಿಗೆ ಸಂಬಂಧಿಸಿ ಆಸ್ತಿ ಮಾಹಿತಿ ಕೋರಿ ಸಂಬಂಧಪಟ್ಟ ಪಂಚಾಯ್ತಿಗೆ ಮನವಿ ನೀಡಿರುತ್ತೇನೆ. ಅದಕ್ಕೆ ಉತ್ತರವಾಗಿ ಅವರು ಆರೋಪಿಯ ಹೆಸರಿನಲ್ಲಿರುವ ಒಂದು ನಿವೇಶನಕ್ಕೆ ಸಂಬಂಧಪಟ್ಟ ಖಾತಾ ರಿಜಿಸ್ಟರ್ ಅನ್ನು ನೀಡಿದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಸದರಿ ಖಾತಾ ರಿಜಿಸ್ಟರ್ ಅನ್ನು ನಿಸಿ-4 ಎಂದು ಗುರುತಿಸಲಾಯಿತು.

**:: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ತರೀಕೆರೆ.

ಸಾಕ್ಷಿಯ ಸಹಿ::